ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:03-08-2026ರಂದು ಸೋಮವಾರ ಅಪರಾಹ್ನ 11.30 ಘಂಟೆಗೆ ಜ್ಞಾನ ಸಹ್ಯಾದ್ರಿಯ ನೂತನ ಸಿಂಡಿಕೇಟ್ ಸಭಾಂಗಣದಲ್ಲಿ ಆನ್-ಲೈನ್ ಮೂಲಕ ನಡೆದ 2026-27ನೇ ಆರ್ಥಿಕ ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ನಡಾವಳಿಗಳು.

ಸಭೆಗೆ ಹಾಜರಿದ್ದ ಸದಸ್ಯರುಗಳು

1.	ಪ್ರೊ. ಶರತ್ ಅನಂತಮೂರ್ತಿ ಅಧ್ಯಕ್ಷರು ಮಾನ್ಯ ಕುಲಪತಿಗಳು	ಅಧ್ಯಕ್ಷರು
2.	ಶ್ರೀಮತಿ ಶೋಭಾ. ಹೆಚ್. ಎ. ಜಂಟಿ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು	ಸದಸ್ಯರು
3.	ಶ್ರೀ ಎನ್. ಕುಮಾರ್ ಸರ್ಕಾರದ ಉಪಕಾರ್ಯದರ್ಶಿಗಳು (ತಾಂತ್ರಿಕ ಶಿಕ್ಷಣ ಮತ್ತು ಯೋಜನೆ) ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು.	ಸದಸ್ಯರು
4.	ಶ್ರೀ ಬಸವರಾಜ. ಎಸ್. ಹಿರಿಯ ನಿರ್ದೇಶಕರು ಯೋಜನಾ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ ಬೆಂಗಳೂರು.	ಸದಸ್ಯರು
5.	ಪ್ರೊ. ಸಾಕಮ್ಮ.ಬಿ ಸಿಂಡಿಕೇಟ್ ಸದಸ್ಯರು	ಸದಸ್ಯರು
6.	ಶ್ರೀ ಹೇಮಂತ್. ಐ.ಎ.ಎಸ್. ಕುಲಸಚಿವರು (ಆಡಳಿತ)	ಸದಸ್ಯರು
7.	ಪ್ರೊ. ಆರ್. ತಿಮ್ಮರಾಯಪ್ಪ ಕುಲಸಚಿವರು (ಮೌಲ್ಯಮಾಪನ)	ಸದಸ್ಯರು
8.	ಶ್ರೀಕಾಂತ್. ಕೆ.ಎಸ್. ಕೆ.ಎಸ್.ಎ.ಎಸ್ ಹಣಕಾಸು ಅಧಿಕಾರಿಗಳು	ಸದಸ್ಯ ಕಾರ್ಯದರ್ಶಿಗಳು

[illegible]

1.	ಶ್ರೀ. ಡಿ. ಎಸ್. ಅರುಣ್. ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು	ಸದಸ್ಯರು

ಪ್ರಸ್ತಾವನೆ:

ಪ್ರಾರಂಭದಲ್ಲಿ ಹಣಕಾಸು ಅಧಿಕಾರಿಗಳು 2026–27ನೇ ಸಾಲಿನ ಆರ್ಥಿಕ ವರ್ಷದ ಪ್ರಥಮ ಹಣಕಾಸು ಸಮಿತಿ ಸಭೆಯ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಸ್ವಾಗತಿಸಿ ನೂತನ ಸದಸ್ಯರಾದ ಪ್ರೊ. ಸಾಕಮ್ಮ. ಬಿ. ಇವರನ್ನು ಸಭೆಗೆ ಪರಿಚಯಿಸಿ ಎಲ್ಲಾ ಸದಸ್ಯರನ್ನು ಸ್ವಾಗತಿಸಿದರು.

ನಂತರ ಸಭೆಯ ಅಧ್ಯಕ್ಷರ ಅನುಮತಿ ಪಡೆದು ಸಭಾ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

2026–ಹಸ:1.1 ದಿನಾಂಕ:23–03–2026ರಂದು ನಡೆದ 2025–26ನೇ ಹಣಕಾಸು ವರ್ಷದ ಚತುರ್ಥ ಹಣಕಾಸು ಸಮಿತಿ ಸಭೆಯ ನಡಾವಳಿಗಳ ದೃಢೀಕರಣ.

ನಿರ್ಣಯ: ದಿನಾಂಕ:23–03–2026ರಂದು ನಡೆದ 2025–26ನೇ ಹಣಕಾಸು ವರ್ಷದ ಚತುರ್ಥ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಪರಿಶೀಲಿಸಿ ದೃಢೀಕರಿಸಿತು.

2026–ಹಸ:1.2 ದಿನಾಂಕ:23–03–2026ರಂದು ನಡೆದ 2025–26ನೇ ಹಣಕಾಸು ವರ್ಷದ ಚತುರ್ಥ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.

ನಿರ್ಣಯ: ದಿನಾಂಕ:23–03–2026ರಂದು ನಡೆದ 2025–26ನೇ ಹಣಕಾಸು ವರ್ಷದ ಚತುರ್ಥ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಅನುಮೋದಿಸಿತು.

2026–ಹಸ:1.3 2022–23 ಮತ್ತು 2023–24ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಅನುಪಾಲನಾ ವರದಿಯ ಅನುಮೋದನೆ ಕುರಿತು.

ಚರ್ಚೆ 2022–23 ಮತ್ತು 2023–24ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಅನುಪಾಲನಾ ವರದಿಯ ಅನುಮೋದನೆಯನ್ನು ಕೋರಿದರು. ಸರ್ಕಾರದ ಪ್ರತಿನಿಧಿಗಳು ಆಡಿಟ್ ವರದಿಯಲ್ಲಿನ 12.6ನಲ್ಲಿನ ಅಕ್ಷೇಪಣೆ ಕುರಿತು ಕೆ.ಟಿ.ಪಿ.ಪಿ ನಿಯಮ ಪಾಲಿಸದೇ ಕರಾರು ಒಪ್ಪಂದ ಅವಧಿಯು ಮುಕ್ತಾಯಗೊಂಡಿದ್ದರೂ ಹೊರಗುತ್ತಿಗೆ ಸಿಬ್ಬಂದಿಗಳ ಸೇವೆಗೆ ಹೊಸದಾಗಿ ಟೆಂಡರ್ ಪ್ರಕ್ರಿಯೆ ಕೈಗೊಳ್ಳದ ಕುರಿತು ಹಾಗೂ ಅತಿಥಿ ಉಪನ್ಯಾಸಕರ ಕಡಿತಗೊಳಿಸುವ ಬಗ್ಗೆ ಕೈಗೊಂಡಿರುವ ಕ್ರಮದ ಬಗ್ಗೆ ಸಭೆಗೆ ಮಾಹಿತಿ ನೀಡಲು ಕೋರಿದರು. ಈ ಕುರಿತು ಕೈಗೊಂಡ ಕ್ರಮಗಳ ಬಗ್ಗೆ ವಿವರವಾದ ವರದಿಯನ್ನು ಮುಂದಿನ ಸಭೆಗೆ ಮಂಡಿಸಲಾಗುವುದೆಂದು ಹಣಕಾಸು ಅಧಿಕಾರಿಗಳು ತಿಳಿಸಿದರು. ಮುಂದುವರೆದು ಪರಿನಿಯಮಗಳನ್ನು ವಿಶ್ವವಿದ್ಯಾಲಯ ಕಾಲಕಾಲಕ್ಕೆ ರಚಿಸಿ, ಸರ್ಕಾರದ ಅನುಮೋದನೆ ಪಡೆಯದೇ ಪಾವತಿಸಿರುವುದು ಆಡಿಟ್ ವರದಿಯಲ್ಲಿ ಕಂಡು ಬಂದಿದ್ದು ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳಬೇಕೆಂದು ಸರ್ಕಾರದ ಪ್ರತಿನಿಧಿಗಳು ಸೂಚಿಸಿದರು. ವಾಸ್ತವಿಕವಾಗಿ ವಿವರಿಸಿದ ಹಣಕಾಸು ಅಧಿಕಾರಿಗಳು ಈ ಬಗ್ಗೆ ತುರ್ತು ಗಮನಹರಿಸಿ ಕ್ರಮಕೈಗೊಳ್ಳಲಾಗುವುದೆಂದು ತಿಳಿಸಲಾಯಿತು.

(Ad-hoc) ಅಡ್–ಹಾಕ್ ಸಮಿತಿ ಸಭೆಯ ಬಗ್ಗೆ ಸುಧೀರ್ಘ ಚರ್ಚಿಸಲಾಗಿ ಅಡ್‌ಹಾಕ್ ಸಮಿತಿಯನ್ನು ರಚಿಸಿ ತುರ್ತಾಗಿ ಸಭೆಯನ್ನು ಕರೆದು ಕ್ರಮಕೈಗೊಳ್ಳಲು ಸದಸ್ಯರು ಆಗ್ರಹಿಸಿದರು. ಈ ಕುರಿತು ಶೀಘ್ರವಾಗಿ ಕ್ರಮಕೈಗೊಳ್ಳಲಾಗುವುದೆಂದು ಹಣಕಾಸು ಅಧಿಕಾರಿಗಳು ಮತ್ತು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು. ಎ.ಸಿ. ಹುಂಡಿಯ ಮೂಲಕ ಮುಂಗಡವಾಗಿ ಪಡೆದು ನಿಯಮಾನುಸಾರ ಎನ್.ಡಿ.ಸಿ. ಹುಂಡಿ ಸಲ್ಲಿಸದೇ ಇರುವ ಪ್ರಕರಣಗಳನ್ನು ಗುರುತಿಸಿ ಬಡ್ಡಿ ಸಮೇತ ಆಡಿಟ್ ವರದಿಯ ಪ್ರಸ್ತಾಪಿಸಿದಂತೆ ವಸೂಲಾತಿಗೆ ಕ್ರಮಕೈಗೊಳ್ಳಲು ಸಭೆಯು ಸೂಚಿಸಿತು.

ನಿರ್ಣಯ 2022–23 ಮತ್ತು 2023–24ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗಳ ಅನುಪಾಲನಾ ವರದಿಯ ವಿವಿಧ ಪ್ರಾಧಿಕಾರಗಳ ಅನುಮೋದನೆಯನ್ನು ಪಡೆದು ಘನ ಸರ್ಕಾರಕ್ಕೆ ಸಲ್ಲಿಸಲು ಅನುಮೋದಿಸಲಾಯಿತು.

2026–ಹಸ:1.4 ಕುವೆಂಪು ವಿಶ್ವವಿದ್ಯಾಲಯದ ಅಧ್ಯಾಪಕ/ಅಧ್ಯಾಪಕೇತರ ನೌಕರರ ವಿಶ್ರಾಂತಿ ವೇತನ ಬಾಬ್ತು ಅನುದಾನ ಒದಗಿಸುವ ಕುರಿತು.

ಚರ್ಚೆ ಕುವೆಂಪು ವಿಶ್ವವಿದ್ಯಾಲಯದ ಅಧ್ಯಾಪಕ/ಅಧ್ಯಾಪಕೇತರ ನೌಕರರ ವಿಶ್ರಾಂತಿ ವೇತನವನ್ನು ಹೆಚ್ಚುವರಿ ಬಿಡುಗಡೆ ಮಾಡಬೇಕೆಂದು ಸಭೆಯನ್ನು ಕೋರಿದರು. ನಿವೃತ್ತರಾಗುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದ್ದು ಸರ್ಕಾರ ನೀಡುವ ವಿಶ್ರಾಂತಿ ವೇತನ ಅನುದಾನ ಕೊರತೆ ಉಂಟಾಗಿರುತ್ತದೆ. 2026–27ನೇ ಸಾಲಿನಲ್ಲಿ 40 ನೌಕರರು ನಿವೃತ್ತಿ ಹೊಂದುತ್ತಿದ್ದು, ನಿವೃತ್ತ ನೌಕರರಿಗೆ ನಿವೃತ್ತಿ ಸೌಲಭ್ಯಗಳನ್ನು ನೀಡಲಾಗಿಲ್ಲ ಹಾಗೂ ವಿಶ್ವವಿದ್ಯಾಲಯದ ಎನ್. ಪಿ. ಎಸ್. ಸಿಬ್ಬಂದಿಗಳ ಉದ್ಯೋಗದಾತರ ವಂತಿಕೆ, ಅತಿಥಿ ಉಪನ್ಯಾಸಕರ ಸಂಭಾವನೆ, ಶೈಕ್ಷಣಿಕ ಆಡಳಿತಾತ್ಮಕ ವೆಚ್ಚಗಳು ಇತ್ಯಾದಿ ಇತರೆ ವೆಚ್ಚಗಳಿಗೆ ವಿಶ್ವವಿದ್ಯಾಲಯ ಆಂತರಿಕ ಸಂಪನ್ಮೂಲವೇ ಆಧಾರವಾಗಿದ್ದು ಪಿಂಚಣಿ ಪಾವತಿಗೆ ಆಂತರಿಕ ಸಂಪನ್ಮೂಲದಿಂದ ಭರಿಸಲು ಸೂಕ್ತವಾಗುತ್ತಿಲ್ಲವೆಂದು ಹಣಕಾಸು ಅಧಿಕಾರಿಗಳು ಸಭೆಗೆ ವಾಸ್ತಾವಂಶಗಳನ್ನು ವಿವರಿಸಿದರು.

2026–27ನೇ ಸಾಲಿಗೆ ವಿಶ್ರಾಂತಿ ವೇತನಕ್ಕಾಗಿ 42.46ಕೋಟಿಗಳ ಪ್ರಸ್ತಾವನೆಯನ್ನು ಸಲ್ಲಿಸಲಾಗಿತ್ತು. ಸದರಿ ಸಾಲಿಗೆ ಘನ ಸರ್ಕಾರದ ಆಯ–ವ್ಯಯದಲ್ಲಿ ರೂ. 20.00ಕೋಟಿಗಳನ್ನು ಮಾತ್ರ ಕಲ್ಪಿಸಲಾಗಿದೆ. ಹೆಚ್ಚುವರಿ ಮೊತ್ತ ರೂ. 27.14ಕೋಟಿಗಳ ಮೊತ್ತವನ್ನು ಬಿಡುಗಡೆ ಮಾಡಬೇಕೆಂದು ಸರ್ಕಾರದ ಪ್ರತಿನಿಧಿಗಳನ್ನು ಕೋರಿದರು.

ನಿರ್ಣಯ ಹೊರಗುತ್ತಿಗೆ ನೌಕರರನ್ನು ಮತ್ತು ಅತಿಥಿ ಉಪನ್ಯಾಸಕರ ಸಂಖ್ಯೆ ಕಡಿಮೆ ಮಾಡಿ ವರದಿ ಸಲ್ಲಿಸಿದಲ್ಲಿ ಮಾತ್ರ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದೆಂದು ಸರ್ಕಾರದ ಪ್ರತಿನಿಧಿಗಳು ತಿಳಿಸಿದರು. ಅದರಂತೆ ಯು.ಜಿ.ಸಿ ನಿಯಮಾನುಸಾರ ಬೋಧನಾವಧಿಯನ್ನು ಹಂಚಿಕೆ ಮಾಡಿ ಅತಿಥಿ ಉಪನ್ಯಾಸಕರ ಸಂಖ್ಯೆಯನ್ನು ಕಡಿಮೆಗೊಳಿಸಲಾಗುವುದು ಹಾಗೂ ಹೊರಗುತ್ತಿಗೆ ನೌಕರರ ಸಂಖ್ಯೆಯನ್ನು ಕಡಿಮೆಗೊಳಿಸಲು ಈಗಾಗಲೆ ಸಿಂಡಿಕೇಟ್ ಸಭೆಗೆ ಮಂಡಿಸಲಾಗಿದ್ದು, ಅದರಲ್ಲಿ ನಿರ್ಣಯಿಸಿದಂತೆ ಹೊರಗುತ್ತಿಗೆ ನೌಕರರನ್ನು ಸಹ ಕಡಿಮೆ ಮಾಡಿ ಸರ್ಕಾರಕ್ಕೆ ಹಾಗೂ ಮುಂದಿನ ಹಣಕಾಸು ಸಮಿತಿ ಸಭೆಗೆ ವರದಿಯನ್ನು ಮಂಡಿಸಲಾಗುವುದು ಹಾಗೂ ಹೆಚ್ಚುವರಿ ಅನುದಾನದ ಕೋರಿಕೆಯನ್ನು ಪರಿಗಣಿಸಲು ಸರ್ಕಾರದ ಪ್ರತಿನಿಧಿಗಳಿಗೆ ಮಾನ್ಯ ಕುಲಪತಿಗಳು ಕೋರಿದರು.

2026–ಹಸ:1.5 STATUTES RELATING TO QUALIFICATION AND METHODS OF RECRUITMENT AND PROMOTION FROM THE POST OF LIBRARY ASSISTANTS TO ASSISTANT LIBRARIANS IN KUVEMPU UNIVERSITY AND ITS CONSTITUENT COLLEGES-2025ರ ಅನುಮೋದನೆ ಕುರಿತು.

ನಿರ್ಣಯ ಈ ಬಗ್ಗೆ ಈಗಾಗಲೇ ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿದೆ. ಯಾವುದೇ ಪರಿನಿಯಮ ರಚಿಸುವ ಪ್ರಕ್ರಿಯೆ ಉದ್ಭವಿಸುವುದಿಲ್ಲವಂಬ ನಿರ್ಣಯ ಸರಿಯಾಗಿದ ಸರ್ಕಾರದ ಪ್ರತಿನಿಧಿಗಳು ಸರ್ಕಾರದ ಪತ್ರ ಸಂಖ್ಯೆ:ಇಡಿ 70 ಯುಎಸ್‌ವಿ 2020 ದಿನಾಂಕ:29–12–2020 ರನ್ವಯ ಕ್ರಮವಹಿಸಲು ತಿಳಿಸಿದರು.

2026–ಹಸ:1:6 ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು – ಯಾವುದು ಇರುವುದಿಲ್ಲ.

ಅಂತಿಮವಾಗಿ ಸಭೆಗೆ ಆಗಮಿಸಿ ತಮ್ಮ ಅತ್ಯಮೂಲ್ಯ ಸಲಹೆ/ಸಹಕಾರಗಳನ್ನು ನೀಡಿದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ಹಣಕಾಸು ಅಧಿಕಾರಿಯವರು ವಂದಿಸಿದ ನಂತರ ಸಭೆಯು ಮುಕ್ತಾಯಗೊಂಡಿತು.

(ಶ್ರೀಕಾಂತ್.ಕೆ. ಎಸ್. ಕೆಎಸ್‌ಎಎಸ್.)
ಹಣಕಾಸು ಅಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿಗಳು

ಹಣಕಾಸು ಅಧಿಕಾರಿ
ಕುವೆಂಪು ವಿಶ್ವವಿದ್ಯಾಲಯ
ಶಂಕರ ಘಟ್ಟ-577 451

ಸಹಿ/–
(ಪ್ರೊ. ಶರತ್ ಅನಂತಮೂರ್ತಿ)
ಕುಲಪತಿಗಳು ಹಾಗೂ ಅಧ್ಯಕ್ಷರು